ದಿನಾಂಕ: 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಬಿ.ಕೆ.ಜೆ. ಪ್ರತಿವಾದಿ ಪರ ವಕೀಲರಿಂದಃ**

40. ನಾನು ದಾವ ಮಾಡಿದ ಆಸ್ತಿಗಳಿಗೆ ಪಂಚಾಯತಿಯವರು ಉತಾರ ಕೊಟ್ಟು ಮನೆ ನಂಬರಗಳನ್ನು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ತಾವು ಖರೀದಿ ಮಾಡಿದ ಆಸ್ತಿಗೆ ಪಂಚಾಯತಿಯವರು ಕೊಟ್ಟ ನಂಬರನ್ನು ನಮೂದಿಸಿದ್ದಾರೆ ಮತ್ತು ಖರೀದಿ ಮಾಡಿದ ಆಸ್ತಿಗೆ ಚಕ್ಕಬಂದಿಯನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾಆಸ್ತಿಗಳಲ್ಲಿ ಈಗ ಮನೆಗಳನ್ನು ಕಟ್ಟಿದ್ದಾರೆ ಎಂದರೆ ಸರಿ.

41. ಈಗ ಸಾಕ್ಷಿದಾರರಿಗೆ ದಾವಾ ಆಸ್ತಿಯಲ್ಲಿ ಕಟ್ಟಿದ ಮನೆಗಳ ಫೋಟೋಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಒಪ್ಪಿಕೊಳ್ಳುತ್ತಾರೆ ಸದರಿ ಫೋಟೋಗಳನ್ನು ಒಟ್ಟಾಗಿ ನಿಡಿ-1 ಎಂದು ಗುರುತಿಸಲಾಯಿತು. ಸದರಿ ಮನೆಗಳಿಗೆ ಪ್ರತಿವಾದಿಯರು ಪಂಚಾಯತಿಗೆ ತೆರಿಗೆ ತುಂಬುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿ ಪ್ರತಿವಾದಿಯರು ಖರೀದಿ ಮಾಡಿದ ಆಸ್ತಿಗಳಲ್ಲಿ ಮನೆ ಕಟ್ಟಿರುವ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

42. ಪ್ರತಿವಾದಿಯರ ಹೆಸರುಗಳಿಗೆ ಆದ ಖರೀದಿ ಪತ್ರಗಳಿಗೆ ನನ್ನ ತಂದೆ, ತಾಯಿ ಸಹೋದರ ಸಹೋದರಿಯರು ಹಾಗೂ ಕೆಲವೊಂದು ಖರೀದಿ ಪತ್ರಗಳಿಗೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿರುವ ದಾವಾ ಆಸ್ತಿಗಳಿಗೆ ಪಂಚಾಯತಿಯವರು ಉತಾರ ಕೊಟ್ಟಿದ್ದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ. ಪ್ರತಿವಾದಿಯರು ವಾಸ ಇರುವ ಮನೆಗಳ ವಿಸ್ತೀರ್ಣ ಹಾಗೂ ಅದರ ಮೌಲ್ಯ ನನಗೆ ಹೇಳಲು ಬರುವುದಿಲ್ಲ. ಪಂಚಾಯತಿ ಯವರು ದಾವಾ ಆಸ್ತಿಗಳಲ್ಲಿಯ ಮನೆಗಳಿಗೆ ನಂಬರ ಕೊಟ್ಟಿದ್ದು ತಪ್ಪು ಇದೆ ಎಂದು ಹೇಳಿ ನಾನು ಯಾವುದೇ ಅಪೀಲು ಸಲ್ಲಿಸಿಲ್ಲ.

43. ನನ್ನ ತಂದೆ ಗೋಕಾಕ ಮಿಲ್ಲನಲ್ಲಿ ನೌಕರಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಹಿರಿಯರ ಆಸ್ತಿ ಏನು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಸಿದ್ದಪ್ಪ 1996ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಖರೀದಿ ಮಾಡಲು ನನ್ನ ತಂದೆ ದುಡ್ಡು ಎಲ್ಲಿಂದ ತಂದಿದ್ದರು ನನಗೆ ಗೊತ್ತಿಲ್ಲ. ಮುಂದುವರೆದ ಕೂಲಿ ಮಾಡಿ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿ ನಮ್ಮ ತಂದೆ ಸ್ವಂತ ಖರೀದಿ ಮಾಡಿದ ಆಸ್ತಿ ಎಂದರೆ ಸರಿ.

44. ನಮ್ಮ ತಂದೆ ಮರಣಾ ನಂತರ ನಾನು ನನ್ನ ತಂದೆಯ ಆಸ್ತಿಯಲ್ಲಿ ಪಾಲು ಕೇಳಿ ಈ ದಾವೆ ಸಲ್ಲಿಸಿದ್ದೇನೆ. ನನ್ನ ತಂದೆ ಜೀವಿತ ಇದ್ದಾಗ ಪ್ರತಿವಾದಿಯರ ಹೆಸರಿಗೆ  ಆದ ಖರೀದಿ ಪತ್ರಗಳು ತಪ್ಪು ಇವೆ ಎಂದು ನನ್ನ ತಂದೆ

ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ತಂದೆಯ ಹೆಸರಿಗೆ ಇದ್ದಾಗ ಅದರ ಬೆಲೆ ಎಷ್ಟು ಬಾಳುತ್ತಿತ್ತು ನನಗೆ ಗೊತ್ತಿಲ್ಲ. ಪ್ರತಿವಾದಿಯರ ಹೆಸರಿಗೆ ಖರೀದಿ ಪತ್ರಗಳಾದ ನಂತರ ಈಗ ಎಷ್ಟು ದಾವಾ ಆಸ್ತಿ ಉಳಿದಿದೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನಾನು ಪಾಲು ಕೇಳಿದ್ದನ್ನು ಹೊರತುಪಡಿಸಿ ಯಾವುದೇ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

45. ನಾನು ನನ್ನ ತಂದೆಯ ಮರಣಾ ನಂತರ ಪ್ರತಿವಾದಿಯರಿಗೆ ಮತ್ತು ಪಂಚಾಯತಿಯವರಿಗೆ ಹೋಗಿ ನನ್ನ ತಂದೆ ಏನಾದರು ದಾಖಲೆ ಬರೆದುಕೊಟ್ಟಿದ್ದಾರಾ ಎಂದು ಪ್ರಶ್ನಿಸಿದಾಗ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ ಮತ್ತು ಪಂಚಾಯತಿಯಲ್ಲಿ ಯಾವುದೇ ದಾಖಲೆ ಇರುವುದಿಲ್ಲ ಎಂದು ಪಂಚಾಯತಿಯವರು ಹೇಳಿದಾಗ ನಾನು ಪಾಲು ಕೋರಿ ಈ ದಾವೆ ದಾಖಲ ಮಾಡಿರುತ್ತೇನೆ.

46. ದಾವಾ ಆಸ್ತಿ ನಮ್ಮ ತಂದೆಯ ಸ್ವಂತ ಸಂಪಾದಿಸಿದ ಆಸ್ತಿಯಾಗಿದ್ದರಿಂದ ದಾವಾ ಆಸ್ತಿಯಲ್ಲಿ ನನಗೆ ಪಾಲುಕೇಳಲುಬರುವುದಿಲ್ಲ ಎಂದರೆ ಸರಿಯಲ್ಲ. ಶಿಂಧಿಕುರಬೇಟ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಆಸ್ತಿಗಳಿಗೆ ಕಂಪ್ಯೂಟರ್ ಉತಾರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಂಪ್ಯೂಟರ್ ಉತಾರ ಮಾಡಲು ಪ್ರತಿಯೊಂದು ಫೋಟೋ, ಆಸ್ತಿಯ ಮುಂದೆ ನಿಂತ ಮಾಲೀಕರ ಫೋಟೋ, ಚಕ್ಕಬಂದಿ ಇವುಗಳನ್ನು ಕೊಟ್ಟಲ್ಲಿ ಉತಾರ ಮಾಡುತ್ತಾರೆ ಎಂದರೆ ಸರಿ.

47. ಈ ದಾವೆ ಹೂಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವೆ ಹೂಡುವ ಸಮಯದಲ್ಲಿ ನಮ್ಮ ವಕೀಲರಿಗೆ ಯಾವ ಯಾವ ದಾಖಲೆಗಳನ್ನು ತೆಗೆಯಿಸಿ ಕೊಟ್ಟಿದ್ದೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಎಷ್ಟು ಜನರ ಮೇಲೆ ಮಾಡಿದ್ದೇನೆಂದು ನನಗೆ ಗೊತ್ತಿಲ್ಲ. ನಾನು ಯಾರ ಮೇಲೆ ದಾವೆ ಮಾಡಿದ್ದೇನೆಂದು ಅವರ ಹೆಸರು ಸಹ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಹೆಸರಿನಲ್ಲಿ ಯಾರ ಯಾರ ಹೆಸರಿಗೆ ಎಷ್ಟು ನಿವೇಶನ ಇವೆ ಎಂದು ನನಗೆ ಗೊತ್ತಿಲ್ಲ. ಈ ದಾವೆ ಮಾಡಲು ಯಾವುದೇ ಕಾರಣ ಉಂಟಾಗದೇ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ